ಗಂಜಾಂ ನಾಗರಾಜ್, ಮೈಸೂರು

ಕೋಳಿಯನ್ನು ಕೇಳಿ ಸಾಂಬಾರಿಗೆ ಮಸಾಲೆ ಅರೆಯೋದು ಹೇಗೆ?



ಅದೇನೂ ಕಷ್ಟವಲ್ಲ. ನೀವೇನು ಕೇಳಿದರೂ ಕೋಳಿ ಕೋ ಕೋ ಕೋ ಎನ್ನುತ್ತದೆ.

ನಾರಾಯಣ ಯಾಜಿ, ಶಿರಾಲಿ

ಬದುಕು ರೈಲು ಪಯಣ ಎಂದರು ಬೀಚಿ. ಶಂಕರ, ವಿವೇಕಾನಂದರಂಥ ಅಲ್ಪಾಯುಷಿ ಸಾಧಕರದು ವಿಮಾನಯಾನವಲ್ಲವೆ?

ಕೇವಲ ವಿಮಾನವಲ್ಲ, ಪುಷ್ಪವಿಮಾನ. ಇವರು ಸಾಗಿದೆಲ್ಲೆಡೆ ಜ್ಞಾನಪುಷ್ಪಗಳ ಸುಮಧುರ ವಿತರಣೆ.

ಜಯಶ್ರೀ, ಬೆಂಗಳೂರು

ಅತ್ತೆ–ಸೊಸೆ ಮನಸ್ತಾಪಕ್ಕೂ, ಅತ್ತಿಗೆ–ನಾದಿನಿ ಮನಸ್ತಾಪಕ್ಕೂ ಇರುವ ವ್ಯತ್ಯಾಸ?

ಅತ್ತಿಗೆ–ನಾದಿನಿಯದು ಗ್ರಹಣ; ಅತ್ತೆ–ಸೊಸೆಯದು ಗೃಹಭಂಗ.

ಮಲ್ಲಿಕಾರ್ಜುನ, ಸುರಧೇನುಪುರ

ಕೊಟ್ಟವನು ಕೋಡಂಗಿ, ಇಸ್ಕೊಂಡೋವ್ನು ಈರಭದ್ರ. ಕೊಡಿಸ್ದೋವ್ನು?



ಅಂತರ್ಪಿಶಾಚಿ.

ಎಚ್.ಕೆ. ವಿಜಯಕುಮಾರ್, ರಾಯಚೂರು

ಪರದೇಸಿ ನಾಯಿಗಳನ್ನು ಪ್ರೀತಿಯಿಂದ ಸಾಕುವ ಮಂದಿಗೆ ಹೆತ್ತವರನ್ನು ನೋಡಿಕೊಳ್ಳಲು ಆಗುವುದಿಲ್ಲವೇಕೆ?

ಶ್ವಾನಗಳಂತೆ ಬಾಲ ಅಲ್ಲಾಡಿಸಿಕೊಂಡು ಇರಲು ಇವರು ಒಪ್ಪುವುದಿಲ್ಲವಲ್ಲ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಮಾತಿನಿಂದ ಬೆಂಕಿ ಹಚ್ಚುವುದಕ್ಕೂ ಬೆಂಕಿಕಡ್ಡಿಯಿಂದ ಬೆಂಕಿ ಹಚ್ಚುವುದಕ್ಕೂ ಏನು ವ್ಯತ್ಯಾಸ?

ಬೆಂಕಿಕಡ್ಡಿಯ ಬೆಂಕಿಯಿಂದ ಹೊಗೆ; ಮಾತಿನ ಬೆಂಕಿಯಿಂದ ಹಗೆ.

ಜೆ.ಜಿ.ಹಳ್ಳಿ ಚಿದಾನಂದ, ಹಿರಿಯೂರು

ಸಮಾಜದಲ್ಲಿ ಹಣವಂತರಿಗೆ ಸಿಗುವಷ್ಟು ಮರ್ಯಾದೆ ಗುಣವಂತರಿಗೆ ಸಿಗುವುದಿಲ್ಲ. ನೀವೇನಂತೀರಿ?

ಗಾಂಧೀಜಿ ಎಷ್ಟು ಆಸ್ತಿ ಮಾಡಿದ್ದರು? ಕಲಾಂ? ಹಣಕ್ಕೆ ಸಿಗುವ ಮರ್ಯಾದೆ ತಾತ್ಕಾಲಿಕ. ಗುಣಕ್ಕೆ ಶಾಶ್ವತ.

ಶ್ರುತಿ ರಿಗ್ರೆಟ್ ಐಯ್ಯರ್, ಬೆಂಗಳೂರು

ಪತ್ರಿಕೆಗಳಲ್ಲಿ, ಟೀವಿಗಳಲ್ಲಿ ಕಾಣೆಯಾಗಿದ್ದಾರೆ ಎಂದು ಘೋಷಿಸುವರಲ್ಲ, ನಾಪತ್ತೆಯಾದವರು ಮರಳುವರೆ?

ಮರಳದಿದ್ದರೆ ಇರುವವರು ಆಸ್ತಿ ವಿಂಗಡಿಸಿಕೊಳ್ಳಲಾದರೂ ಅಲ್ಲಿಂದ ಏಳು ವರ್ಷಕ್ಕೆ ಇದು ಅವಶ್ಯ.

ಪಿ.ಜೆ. ರಾಘವೇಂದ್ರ, ಮೈಸೂರು

ಪೂಜೆ ಮಾಡುವುದು ಹೊಟ್ಟೆಪಾಡಿಗಾಗಿ ಎನ್ನುವ ರಾಜಕಾರಣಿ ರಾಜಕೀಯ ಮಾಡುವುದು ಡೊಳ್ಳುಹೊಟ್ಟೆಗಾಗಿಯೆ?

ಹೂಂ; ತನ್ನ ಏಳನೆಯ ತಲೆಮಾರಿನವರ ಡೊಳ್ಳುಹೊಟ್ಟೆಗಳಿಗೂ ಸೇರಿದಂತೆ.

ರಮೇಶ್, ಹನುಮನಾಳು

ಮದುವೆಗೆ ಮುಂಚೆ ಪತ್ರ ಬರೆಯುತ್ತಿದ್ದ ಆತ್ಮೀಯರು ನಂತರ ಮೊಬೈಲ್ ಇದ್ದರೂ ಕರೆಯಿಲ್ಲ, ಸಂದೇಶವಿಲ್ಲ. ಏಕೆ?

ಮದುವೆಗೆ ಮುಂಚೆ ಹಂಚಿಕೊಳ್ಳಲು ಕತೆ ಇರುತ್ತೆ. ನಂತರ ಕತೆ ಮುಗಿದಿರುತ್ತದಲ್ಲ!

ಅಮರಯ್ಯಾ ಪತ್ರಿಮಠ, ಸುರಪುರ

ಚಿಂತನೆಗೂ ವಿವೇಚನೆಗೂ ಅಂತರವೇನು?

ಚಿಂತನೆ ಹುಚ್ಚುಕುದುರೆ; ವಿವೇಚನೆ ಕಡಿವಾಣ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

ಹಣವಂತರು ದೇವರಿಗೆ ಹರಕೆ ಹಣ ಸುರಿಯುವ ಬದಲು ಬಡವರಿಗೆ ದಾನ ಮಾಡಿದರೆ ಹೇಗಿರುತ್ತೆ?

ದೇವನ ಬದಲು ಬಡವರಿಗೆ ಹರಕೆ ಹೊತ್ತರೆ ಇಷ್ಟಾರ್ಥ ಸಿದ್ಧಿಸುವುದಾದರೆ ಹಾಗೆ ಮಾಡುವರಂತೆ.

## ವಾರದ ಪ್ರಶ್ನೆ

ಫಾಲನೇತ್ರ ಸಜ್ಜನ, ಶಿರಸಿ

ಮರಣದಂಡನೆಗೆ ಹೆದರುವಷ್ಟು ಜೀವಿತ ಮೀರಿಯೂ ಶಿಕ್ಷಿಸುವ ಕರ್ಮಸಿದ್ಧಾಂತಕ್ಕೇಕೆ ಹೆದರುವುದಿಲ್ಲ?

ಕಾದ ಬಾಣಲೆ ಕುದಿವ ಎಣ್ಣೆಯಲ್ಲಿ ಮನುಜನನ್ನು ಬೇಯಿಸುವ ಲೈವ್ ವಿಡಿಯೊ ಇಲ್ಲದಿರುವುದರಿಂದ.

ಅನಂತಪದ್ಮನಾಭ ಎಚ್.ಎಮ್., ಬೆಂಗಳೂರು

ಮನಿಗೂ moneyಗೂ ಏನು ಸಾಮ್ಯ?

ಎರಡೂ ಗಮನ ನೀಡದಿದ್ದರೆ ಸೋರುವಿಕೆ ನಿಶ್ಚಿತ.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ

ಅಕಾಲಿಕ ಮಳೆ ಹೆಚ್ಚಾಗಲು ಕಾರಣ?

ಅಕಾಲಿಕ ಮೋಡಗಳು!

ಟಿ.ಎಂ. ಮಾನಪ್ಪ, ಶಿವಮೊಗ್ಗ

ಮಳೆಗಾಗಿ ಕಪ್ಪೆ, ಕತ್ತೆಗಳಿಗೇಕೆ ಮದುವೆ?



ಸಂಗಾತಿಯ ಕಾಟ ತಾಳಲಾರದೆ ಅರಚುವುದರಿಂದ ಉಂಟಾದ ಕಂಪನ ಮೋಡವನ್ನು ಕರಗಿಸುವುದಂತೆ.

ಅಂಚೆ ಸುಬ್ರಹ್ಮಣ್ಯ, ಕೊಪ್ಪ

ಗೇರುಹಣ್ಣಿನಲ್ಲಿ ಬೀಜ ಹೊರಗೇಕೆ ಇದೆ?

ಅದು ಔಟ್‌ಸ್ಟ್ಯಾಂಡಿಂಗ್ ಬೀಜವೆಂದು ತೋರಿಸಿಕೊಳ್ಳಲು.

ಕಾವ್ಯಶ್ರೀ ಪತ್ರಿಮಠ, ಸುರಪುರ

ಜಾತಿ, ಧರ್ಮ, ಭಾಷೆಗೂ ಮೀರಿದ್ದು ಏನು?

ಸ್ವಿಗ್ಗಿ, ಬಿಗ್‌ಬಾಸ್ಕೆಟ್, ಅಮೆಝಾನ್ ಆರ್ಡರ್‌ಗಳು.

ಎಂ.ಜಿ. ಉಮಾ, ಬಳ್ಳಾರಿ

ನೂರು ಸುಳ್ಳಿಗಿಂತ ಒಂದು ನಿಜಕ್ಕೆ ಬೆಲೆ ಜಾಸ್ತಿ. ಏಕೆ?

ವ್ಯವಹಾರನಿಯಮ; ವಸ್ತು ಅಪರೂಪವಾದಷ್ಟೂ ಬೆಲೆ ಹೆಚ್ಚಳ.

■ ರಾಮ್